## 1. ವರದಿಯನ್ನೊಪ್ಪಿಸುವುದು

2006–07 ನೇ ಸಾಲಿನ ಹಕ್ಕುಬಾಧ್ಯತೆಗಳ ಸಮಿತಿಯ ಮೂರನೆಯ ವರದಿ

**ಶ್ರೀ ಜಿ. ಬಸವಣ್ಣೆಪ್ಪ (ಹೊಳೆಹೊನ್ನೂರು) :** ಮಾನ್ಯ ಅಧ್ಯಕ್ಷರೆ, 2006–07ನೇ ಸಾಲಿನ ಹಕ್ಕು ಬಾಧ್ಯತೆಗಳ ಸಮಿತಿಯ 3ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಅಧ್ಯಕ್ಷರು :** ಮಂಡಿಸಲಾಯಿತು.

**ಶ್ರೀ ಜೆ. ಸಿ. ಮಾಧುಸ್ವಾಮಿ :** ತಾವು ಭಾಷಣ ಮಾಡಲಿಕ್ಕೆ ನನ್ನನ್ನು ಕರೆದಿದ್ದಕ್ಕೆ ತಮ್ಮನ್ನು ಅಭಿನಂದಿಸುತ್ತೇನೆ.

**ಶ್ರೀ ವಾಟಾಳ್ ನಾಗರಾಜ್ :** ಮಾನ್ಯ ಅಧ್ಯಕ್ಷರೆ, ನಾನು ತಮ್ಮನ್ನು ಕೇಳಿದ್ದೆ. ನನ್ನ ಸ್ನೇಹಿತರಿಗೂ ನಾನು ಮನವಿ ಮಾಡುತ್ತಿದ್ದೇನೆ.

**ಶ್ರೀ ಜೆ. ಸಿ. ಮಾಧುಸ್ವಾಮಿ :** ಸನ್ಮಾನ್ಯ ಯಡಿಯೂರಪ್ಪನವರು 2007–08ನೇ ಸಾಲಿಗೆ

**ಶ್ರೀ ವಾಟಾಳ್ ನಾಗರಾಜ್ :** ದಯವಿಟ್ಟು, ಒಂದ್ನಿಮಿಷ ಯೀಲ್ಡ್ ಆಗಿ.

**ಅಧ್ಯಕ್ಷರು:** ಅವರು yield ಆಗದಿದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಜೆ. ಸಿ. ಮಾಧುಸ್ವಾಮಿ :** ನನ್ನ ಭಾಷಣಕ್ಕೆ ಪೂರಕವಾಗಿ ಮಾತನಾಡುವುದಾದರೆ ನಾನು yield ಆಗುತ್ತೇನೆ. ಬೇರೆ ಏನಾದರೂ ಮಾತನಾಡುವುದಾದರೆ, (ಗೊಂದಲ)

**ಅಧ್ಯಕ್ಷರು :** ಮಾನ್ಯ ವಾಟಾಳ್‌ರವರೆ, ತಾವು ಕುಳಿತುಕೊಳ್ಳಿ, ತಮಗೆ ನಂತರ ಅವಕಾಶ ಕೊಡುತ್ತೇನೆ.

**ಶ್ರೀ ಜೆ. ಸಿ. ಮಾಧುಸ್ವಾಮಿ :** ನಾನು ಇನ್ನೂ ಸಹ ಮಾತು ಪ್ರಾರಂಭವೇ ಮಾಡಲಿಲ್ಲ. ನನ್ನ ಬಗ್ಗೆ ಮಾತನಾಡುತ್ತಾರೆ, ನನ್ನ ಪರವಾಗಿ ಮಾತನಾಡುತ್ತಾರೋ, ವಿರೋಧವಾಗಿ ಮಾತನಾಡುತ್ತಾರೋ, ನನಗೇನು ಗೊತ್ತು ? ನಾನೇಕೆ yield ಅಗಲಿ ? ಬೇರೆ ವಿಚಾರ raise ಮಾಡಲು ಅನುಮತಿಸುವುದು ನಿಮಗೆ ಬಿಟ್ಟಿದ್ದು.

**ಶ್ರೀ ವಾಟಾಳ್ ನಾಗರಾಜ್ :** ನಾನು ಯಾವತ್ತೂ ಪರವೇ ಹೊರತು ವಿರುದ್ಧವಲ್ಲ.

**ಅಧ್ಯಕ್ಷರು :** ನಾನು ಅವಕಾಶ ಕೊಡುತ್ತೇನೆ. ತಾವು ಕುಳಿತುಕೊಳ್ಳಿ. ಅವರು ಪ್ರಾರಂಭ ಮಾಡಲಿ. ಮಾಧುಸ್ವಾಮಿಯವರೇ, ಚರ್ಚೆ ಪ್ರಾರಂಭ ಮಾಡಿ ಎಂದು ನಿಮಗೇ